**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತ ಮೂರನೆಯ ಅಧಿವೇಶನ**

# ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–36)**
**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. ಪದಾವಳಿಗಳ ಪ್ರತಿಯೋಜನೆ.-** ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ರಲ್ಲಿ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) "ನಿರ್ದೇಶಕ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ "ಆಯುಕ್ತ" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 15ರ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(i) ಪ್ರಸ್ತುತವಿರುವ ಖಂಡವನ್ನು (1)ನೇ ಖಂಡವೆಂದು ಸಂಖ್ಯೆಯನ್ನು ನೀಡತಕ್ಕದ್ದು; ಮತ್ತು

(ii) ಹಾಗೆ ಸಂಖ್ಯೆಯನ್ನು ನೀಡಲಾದ (1)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಸ್ಮಾರಕವನ್ನು ದತ್ತು ತೆಗೆದುಕೊಳ್ಳುವ ಯೋಜನೆಯಡಿಯಲ್ಲಿ ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು ಅಥವಾ

ರೂಪಿಸಿರುವ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ, ಕಂಪನಿ ಅಥವಾ ಫರ್ಮ್ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ (LLP) ಸಂಸ್ಥೆ, ಪಾಲುದಾರಿಕೆ ಫರ್ಮ್, ಆಸಕ್ತಿಯುಳ್ಳ ಸೊಸೈಟಿಗಳು ಅಥವಾ ಸಹಕಾರ ಸಂಘಗಳು, ಟ್ರಸ್ಟ್‌ಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳು, ಅವರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಕಾರ್ಯಕ್ರಮಗಳ ಅಡಿಯಲ್ಲಿ ಕರ್ನಾಟಕದಾದ್ಯಂತವಿರುವ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು, ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ತಾಣಗಳ ರಕ್ಷಣೆಗೆ, ಸಂರಕ್ಷಣೆಗೆ, ಜೀರ್ಣೋದ್ಧಾರಕ್ಕೆ, ವಾರ್ಷಿಕ ನಿರ್ವಹಣೆಗೆ ಹಾಗೂ ಪ್ರವಾಸಿಗರಿಗೆ ಮೂಲ ಮತ್ತು ಆಧುನಿಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಅವುಗಳನ್ನು ದತ್ತು ತೆಗೆದುಕೊಳ್ಳುವುದಕ್ಕಾಗಿ 'ಸ್ಮಾರಕ ಮಿತ್ರರು' ಎಂಬ ಪಟ್ಟಿಯಲ್ಲಿ ಸೇರಲು ಅವರು ಅರ್ಹರಾಗಿರುತ್ತಾರೆ."

**4. ಪ್ರಕರಣ 26ರ ತಿದ್ದುಪಡಿ.-** ಮೂಲ ಅಧಿನಿಯಮದ 26ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (iv)ನೇ ಖಂಡದಲ್ಲಿ "ಮೂರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಎರಡು ವರ್ಷಗಳವರೆಗೆ" ಹಾಗೂ "ಎರಡು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಪ್ರಕರಣ 31ರ ತಿದ್ದುಪಡಿ.-** ಮೂಲ ಅಧಿನಿಯಮದ 31ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (i)ರಲ್ಲಿನ "ಮೂರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಎರಡು ವರ್ಷಗಳವರೆಗೆ" ಎಂಬ ಪದಗಳನ್ನು ಹಾಗೂ "ಎರಡು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಖಂಡ (ii)ರಲ್ಲಿನ "ಐದು ನೂರು ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಈ ಮುಂದಿನವುಗಳಿಗಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(1) ಕಂಪನಿ ಅಥವಾ ಫರ್ಮ್ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ (LLP) ಸಂಸ್ಥ ಅಥವಾ ಪಾಲುದಾರಿಕೆ ಫರ್ಮ್, ಆಸಕ್ತಿಯುಳ್ಳ ಸೊಸೈಟಿಗಳು ಅಥವಾ ಸಹಕಾರ ಸಂಘಗಳು, ಟ್ರಸ್ಟ್ ಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳನ್ನು 'ಸ್ಮಾರಕ ಮಿತ್ರರು' ಪಟ್ಟಿಯಲ್ಲಿ ಸೇರಿಸುವುದಕ್ಕೆ ಅರ್ಹರಾಗಿಸುವುದು; ಮತ್ತು

(2) ಈ ಅಧಿನಿಯಮದ ಉಲ್ಲಂಘನೆಗಾಗಿ ದಂಡನೆ ಮತ್ತು ಶಿಕ್ಷೆಯನ್ನು ಪರಿಷ್ಕರಿಸುವುದು.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಚ್.ಕೆ.ಪಾಟೀಲ್**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ರ ಉದ್ಧೃತ ಭಾಗ**

**XXX XXX XXX**

**15. ಸ್ವಯಿಚ್ಛೆಯ ವಂತಿಕೆಗಳು**.- ನಿರ್ದೇಶಕನು ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿನ ವೆಚ್ಚಗಳಿಗಾಗಿ ಸ್ವಯಿಚ್ಛೆ ವಂತಿಗೆಗಳನ್ನು ಸ್ವೀಕರಿಸಬಹುದು ಮತ್ತು ಅವನು ಹಾಗೆ ಸ್ವೀಕರಿಸಿದ ಯಾವುದೇ ನಿಧಿಗಳ ವ್ಯವಸ್ಥಾಪನೆ ಮತ್ತು ವಿನಿಯೋಗದ ಬಗ್ಗೆ ಆದೇಶಗಳನ್ನು ನೀಡಬಹುದು: ಪರಂತು, ಈ ಪ್ರಕರಣದ ಮೇರೆಗೆ ಸ್ವೀಕರಿಸಲಾದ ಯಾವುದೇ ವಂತಿಗೆಯನ್ನು, ಯಾವುದಕ್ಕಾಗಿ ವಂತಿಗೆಯನ್ನು ನೀಡಲಾಯಿತೋ ಆ ಉದ್ದೇಶಕ್ಕಾಗಿ ಹೊರತು ಇತರ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

**XXX XXX XXX**

**26. ದಂಡಗಳು**.-

(1) (i) ಸಂರಕ್ಷಿತ ಸ್ಮಾರಕವನ್ನು ನಾಶಪಡಿಸುವ, ತೆಗೆದುಹಾಕುವ, ಹಾನಿಗೊಳಿಸುವ, ಬದಲಾಯಿಸುವ, ವಿರೂಪಗೊಳಿಸುವ, ಗಂಡಾಂತರಕ್ಕೀಡುಮಾಡುವ ಅಥವಾ ದುರುಪಯೋಗಪಡಿಸುವ; ಅಥವಾ

(ii) ಸಂರಕ್ಷಿತ ಸ್ಮಾರಕದ ಒಡೆಯ ಅಥವಾ ಅಧಿಭೋಗದಾರನಾಗಿದ್ದು 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಉಲ್ಲಂಘಿಸುವ; ಅಥವಾ

(i) ಸಂರಕ್ಷಿತ ಸ್ಮಾರಕದಿಂದ ಯಾವುದೇ ಶಿಲ್ಪ, ಕೆತ್ತನೆ, ಪ್ರತಿಮೆ, ಅರೆಯುಬ್ಬುಚಿತ್ರ, ಶಾಸನ ಅಥವಾ ಇತರ ಅಂತಹುದೇ ವಸ್ತುವನ್ನು ಸ್ಥಾನಪಲ್ಲಟಗೊಳಿಸುವ; ಅಥವಾ

(ii) 20ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಕಾರ್ಯವನ್ನು ಮಾಡುವ

-ಯಾವನೇ ಆಗಲಿ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಉಲ್ಲಂಘಿಸಿ ಯಾವುದೇ ಪುರಾತನ ವಸ್ತುವನ್ನು ಸ್ಥಳ ಬದಲಾಯಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಯಾವುದೇ ಅಂಥ ಉಲ್ಲಂಘನೆಯ ಬಗ್ಗೆ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು ಆದೇಶದ ಮೂಲಕ ಅಂಥ ಪುರಾತನ ವಸ್ತುವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ನಿರ್ದೇಶಿಸಬಹುದು.

**XXX XXX XXX**

**31. ನಿಯಮಗಳ ರಚನಾಧಿಕಾರ.-**

**XXX XXX XXX**

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವು, ಅದರ ಉಲ್ಲಂಘನೆಯು,-

(i) (2)ನೇ ಉಪಪ್ರಕರಣದ (ಎ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;

(ii) (2)ನೇ ಉಪಪ್ರಕರಣದ (ಬಿ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ-ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 24ನೇ ಜುಲೈ 2024

**KARNATAKA LEGISLATIVE COUNCIL**
**ONE HUNDRED AND FIFTY THIRD SESSION**

# THE KARNATAKA ANCIENT AND HISTORICAL MONUMENTS AND ARCHAEOLOGICAL SITES AND REMAINS (AMENDMENT) BILL, 2024

**(LA Bill No. 36 of 2024)**

**(As passed by the Karnataka Legislative Assembly)**

A Bill to amend the Karnataka Ancient and Historical Monuments and Archeological Sites and Remains Act, 1961.

Whereas, it is expedient further to amend the Karnataka Ancient and Historical Monuments and Archeological Sites and Remains Act, 1961, (Karnataka Act 7 of 1962) for the purposes hereinafter appearing;

Be it enacted by the Karnataka State Legislature in the Seventy fifth year of the Republic of India as follows:-

**1. Short title and commencement.-** (1) This Act may be called the Karnataka Ancient and Historical Monuments and Archeological Sites and Remains (Amendment) Act, 2024.

(2)It shall come into force at once.

**2. Substitution of expression**.- In the Karnataka Ancient and Historical Monuments and Archeological Sites and Remains Act, 1961 (Karnataka Act 7 of 1962) (hereinafter referred to as the Principal Act) for the word "Director", where ever it occur the word "Commissioner", shall be substituted.

**3. Amendment of section 15.-** In the Principal Act, in section 15,-

(i) the existing clause shall be numbered as clause (1) ; and

(ii) after clause (1) as so numbered the following shall be inserted, namely:-

" (2) A Company or Firm or Limited Liability Partnership concern (LLP) or a Partnership Firm, interested Societies or Cooperative Societies, Trusts or Non-Governmental Organisations or interested individuals are eligible to be empanelled as 'Smaraka Mitras' to adopt Ancient Monuments and Archaeological sites and remains, Heritage buildings and Heritage areas across Karnataka for conservation, preservation, restoration and annual maintenance, development of tourist basic

and advance amenities under their corporate social responsibility (CSR) programme as per the stipulated guidelines or terms and conditions set forth by the Government of Karnataka and issued thereon from time to time by the way of Notification under the scheme of Adopt a Monument".

**4. Amendment of section 26.-** In the Principal Act, in section 26, in sub-section (1), in clause (iv), for the words " three months" the words "two years" and for the words "two thousand rupees" the words "Rupees one lakh" shall be substituted.

**5. Amendment of section 31.-** In the Principal Act, in section 31, in sub-section (3),-

(i) in clause (i) for the words " three months" the words "two years" and for the words "two thousand rupees" the words "Rupees one lakh" shall be substituted; and

(ii) in clause (ii) for the words "five hundred rupees" the words "Rupees one lakh" shall be substituted.

## STATEMENT OF OBJECTS AND REASONS

**(As appended to at the time of Introduction)**

It is considered necessary to amend the Karnataka Ancient and Historical Monuments and Archeological Sites and Remains Act, 1961 (Karnataka Act 7 of 1962) to,-

(1) make eligible a Company or Firm or Limited Liability Partnership concern (LLP) or a Partnership Firm, interested Societies or Cooperative Societies, Trusts or Non-Governmental Organisations or interested individuals to be empanelled as 'Smaraka Mitras'.; as

(2) revise penalty and punishment for the violation of the Act.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**H. K. PATIL**
Minister for Law and Parliamentary
Affair, Legislation and Tourism

**K.R. MAHALAKSHMI**
Secretary
Karnataka Legislative Council

**ANNEXURE**

**Extract from the Karnataka Ancient and Historical Monuments and Archeological Sites and Remains Act, 1961 (Karnataka Act 07 of 1962)**

**XXX XXX XXX**

**15. Voluntary contributions.-**The Director may receive voluntary contributions towards the cost of maintaining a protected monument and may give orders as to the management and application of any funds so received by him: Provided that no contribution received under this section shall be applied to any purpose other than the purpose for which it was contributed.

**XXX XXX XXX**

**26. Penalties.-** Whoever,-

(1) (i) destroys, removes, injures, alters, defaces, imperils, or misuses a protected monument; or

(ii) being the owner or occupier of a protected monument, contravenes an order made under sub-section (1) of section 9 or under sub-section (1) of section 10; or

(iii) removes from a protected monument any sculpture, carving, image, bas relief, inscription or other like object;

(iv) does any act in contravention of sub-section (1) of section 20, -shall be punishable with imprisonment which may extend to three months, or with fine which may extend to two thousand rupees, or with both.

(2) Any person who moves any antiquity in contravention of a notification under subsection (1) of section 22 shall be punishable with imprisonment which may extend to three months or fine which may extend to five hundred rupees or with both, and the court convicting a person of any such contravention may by order direct that such antiquity shall be forfeited to Government.

**XXX XXX XXX**

**31. Power to make rules.-**

(**XXX XXX XXX**

(3) Any rule made under this section may provide that a breach thereof shall be punishable,-

(i) in the case of a rule made with reference to clause (a) of sub-section (2), with imprisonment which may extend to three months, or with fine which may extend to two thousand rupees, or with both;

(ii) in the case of a rule made with reference to clause (b) of sub-section (2), with fine which may extend to five hundred rupees.

(4) Every rule made under this section shall be laid as soon as may be after it is made, before each House of the State Legislature while it is in session for a total period of thirty days which may be comprised in one session or in two successive sessions, and if before the expiry of the session in which it is so laid or the session immediately following, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be; so however that any such modification or annulment shall be without prejudice to the validity of anything previously done under that rule.

**XXX** **XXX** **XXX**

Govt. Press, Vikasa Soudha, Bengaluru, 24th July, 2024, P7, W.D., Copies 300